**Code No. 18 Z**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ತೃತೀಯ ಪತ್ರಿಕೆ

## ಸೂತ್ರಗಳು ಮತ್ತು ಸಂಕ್ಷೇಪಿಸುವಿಕೆ

ಜನವರಿ, 2016 ಸಮಯ : 2½ ಗಂಟೆಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ನೇರವಾಗಿರಬೇಕು.

I. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಒಂದಕ್ಕೆ*** ಮಾತ್ರ ಉತ್ತರಿಸಿ : 1 × 15 = 15

1. ಅಂತ್ಯದಲ್ಲಿ ಸಣ್ಣ ಕೊಕ್ಕೆಗಳನ್ನು ಉದಾಹರಣೆ ಸಹಿತ ವಿವರಿಸಿ.

***ಅಥವಾ***

2. ಸಂಯುಕ್ತಾಕ್ಷರ ಸೂತ್ರವನ್ನು ಉದಾಹರಣೆ ಸಹಿತ ವಿವರಿಸಿ.

II. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಮೂರಕ್ಕೆ*** ಟಿಪ್ಪಣಿ ಬರೆಯಿರಿ : 3 × 5 = 15

1. ದ್ವಿರೂಪ ತವ ದವ
2. ಓಂಗೆರೆ "ಹ"
3. ಅಧೋಮುಖ ಲ–ಳ
4. ತೃತೀಯ ಮತ್ತು ಸಪ್ತಮಿ ವಿಭಕ್ತಿ ಪ್ರತ್ಯಯಗಳು
5. ಧನಸೂಚಕ ಚಿಹ್ನೆ

III. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದು*** ಪದಗಳಿಗೆ ಅರ್ಥ ವ್ಯತ್ಯಾಸವುಳ್ಳ ಪದಗಳನ್ನು ಬರೆಯಿರಿ : 5 × 2 = 10

1. ಪ್ರಮಾಣ – ಪರಿಮಾಣ
2. ಕೆಲವರು – ಕೆಲವಾರು
3. ಅವರಿವರಿಗೆ – ಅವರಿವರಿಗೆ
4. ಸರ್ವದಾ – ಸರ್ವಥಾ
5. ಮುಂತಾಗಿ – ಮುಂದಾಗಿ
6. ಹುಟ್ಟುವಳಿ – ಹಿಡುವಳಿ
7. ವರ್ಷಕ್ಕೊಂದು ಸಾರಿ – ವರ್ಷಗಳಿಗೊಂದು ಸಾರಿ

[ Turn over

IV. ಈ ಕೆಳಗಿನ ಪದಗಳಿಗೆ ಸಂಕ್ಷೇಪ ರೂಪದ ರೇಖಾಕ್ಷರಗಳನ್ನು ಬರೆಯಿರಿ : 5 × 1 = 5

1. ಲೇಣಿದೇಣಿ
2. ರಾಜಕಾರಣಿ
3. ವಂಶಪಾರಂಪರ್ಯ
4. ನಿರಕ್ಷರಕುಕ್ಷಿ
5. ದಿಗ್ಮಂಡಲ

V. ಈ ಕೆಳಗಿನ ಪದಗಳಿಗೆ ಪದಸಮೂಹವನ್ನು ಬರೆಯಿರಿ : 5 × 1 = 5

1. ಎಡರು ತೊಡರುಗಳು
2. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ
3. ಅಲ್ಪವಿದ್ಯಾಮಹಾಗರ್ವಿ
4. ಕೈಗೊಳ್ಳಬೇಕಾಗಿರುವುದು
5. ಧಾರಣೆವಾಸಿಗಳು

VI. ಈ ಕಳಗೆ ಕೊಟ್ಟಿರುವ ವಿಷಯವನ್ನು ಪರೋಕ್ಷ ವಿಧಾನದಲ್ಲಿ 500 ಅಕ್ಷರಗಳಿಗೆ ಮೀರದಂತೆ ಸಂಕ್ಷೇಪಿಸಿ ಬರೆಯಿರಿ : 50

ಕರ್ನಾಟ ರಾಜ್ಯದ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳನ್ನುದ್ದೇಶಿಸಿ ಈ ರೀತಿ ಭಾಷಣ ಮಾಡಿದರು.

ನಾನು ಅಧಿಕಾರ ವಹಿಸಿಕೊಂಡ ಮೇಲೆ ಮೊದಲ ಬಾರಿ ತಮ್ಮನ್ನು ಭೇಟಿ ಮಾಡಲು ಅವಕಾಶ ಸಿಕ್ಕಿದ್ದಕ್ಕೆ ಸಂತೋಷವಾಗಿದೆ. ಕೆಲವು ದಿನಗಳ ಹಿಂದೆ ತಾವು ನಮ್ಮ ರಾಜ್ಯದಲ್ಲಿ ಲೋಕಸಭೆಯ ಸದಸ್ಯರ ಚುನಾವಣೆಯನ್ನು ನಿಷ್ಪಕ್ಷಪಾತವಾಗಿ ಹಾಗೂ ಶಾಂತ ರೀತಿಯಿಂದ ನಡೆಸಿಕೊಂಡು ಬಂದಿದ್ದಕ್ಕೆ ಎಲ್ಲಾ ಜಿಲ್ಲಾಧಿಕಾರಿಗಳನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಭೂ ಸುಧಾರಣೆ ಕೆಲಸವು ಮೊದಲು ಶೀಘ್ರಗತಿಯಿಂದ ಪ್ರಾರಂಭವಾದರೂ ಅನೇಕ ಕಾರಣಗಳಿಂದ ಅದರ ಗತಿ ಮಂದವಾಗಿದೆ. ಈ ಕಾರ್ಯಕ್ರಮ ಅತಿ ಮಹತ್ವದ ಕಾರ್ಯಕ್ರಮ ಆಗಿರುವುದರಿಂದ ಇದನ್ನು ಆದಷ್ಟು ಬೇಗ ಪೂರೈಸುವುದು ಅವಶ್ಯಕವಾಗಿದೆ. ಭೂ ಸುಧಾರಣಾ

ಮಂಡಳಿಗಳು ಗೇಣಿದಾರರಿಗೆ ಭೂಮಿಯ ಒಡೆತನದ ಹಕ್ಕನ್ನು ಕೊಟ್ಟ ಮಾತ್ರಕ್ಕೆ ಆ ಕೆಲಸ ಪೂರ್ತಿ ಆಗುವುದಿಲ್ಲ. ಅವನಿಗೆ ಒಡೆತನದ ಹಕ್ಕನ್ನು ಪಟ್ಟಾ ಮೂಲಕ ತಕ್ಷಣ ಕೊಡುವುದು ಒಂದು ಮಹತ್ವದ ಅಂಶವಾಗಿದೆ. ಗೇಣಿದಾರರು ಭೂ ಮಾಲೀಕರಾದ ಮೇಲೆ ಅವರಿಗೆ ತಮ್ಮ ಉತ್ಪನ್ನವನ್ನು ಹೆಚ್ಚಿಸಿಕೊಳ್ಳಲು ಸೌಲಭ್ಯಗಳು ಹಾಗೂ ಇತರೆ ಸಾಮಗ್ರಿಗಳು ದೊರೆಯುವಂತೆ ಮಾಡುವುದು ಅತಿ ಮಹತ್ವದ ಸಂಗತಿ. ಇದಕ್ಕಾಗಿ ಅವರಿಗೆ ಸಹಕಾರ ಸಂಸ್ಥೆ ಇಲ್ಲವೇ ಬ್ಯಾಂಕುಗಳ ಮೂಲಕ ಸಾಲ ಒದಗಿಸುವ ವ್ಯವಸ್ಥೆ ಮಾಡಬೇಕು. ಆಗ ಮಾತ್ರ ಈ ಕೆಲಸ ಮುಗಿಯುತ್ತದೆ.

ಈ ವರ್ಷ ಜನತಾ ಮನೆಗಳನ್ನು ಎಲ್ಲೆಲ್ಲಿ ಕಟ್ಟಬೇಕಾಗಿದೆಯೋ ಅಲ್ಲಿ ಮುಂದಿನ ಮಳೆಗಾಲದೊಳಗೆ ಕಟ್ಟಿ ಕೆಲಸವನ್ನು ಬೇಗನೆ ಮುಗಿಸಬೇಕಾಗಿದೆ. ಈ ಕೆಲಸಕ್ಕಾಗಿ ಅರಣ್ಯ ಕೈಗಾರಿಕಾ ಕಾರ್ಪೋರೇಷನ್‌ನಿಂದ ಮರದ ಸಾಮಾನುಗಳನ್ನು ಸರಬರಾಜು ಮಾಡುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಂಡಿದೆ. ಆದರೆ ಈ ಮನೆಗಳಿಗೆ ಹೆಂಚುಗಳ ಕೊರತೆಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಇದಕ್ಕಾಗಿ ಹೆಂಚುಗಳನ್ನು ತಯಾರಿಸುವ ಕಾರ್ಖಾನೆಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿಸಲು ನಾನು ಯೋಚಿಸಿದ್ದೇನೆ.

ಅಂತೆಯೇ ಸಾಲದ ಹೊರೆಯಿಂದ ನರಳುತ್ತಿರುವವರನ್ನು ವಿಮೋಚನೆಗೊಳಿಸಲು ನಾವು ಸಾಕಷ್ಟು ಗಮನಹರಿಸಿಲ್ಲವೆಂದು ನನ್ನ ಭಾವನೆ. ಹಿಂದೆ ನಮ್ಮ ಸರ್ಕಾರ ಋಣ ಪರಿಹಾರ ಕಾಯ್ದೆಯ ಮೂಲಕ ಬಡವರ ಹಾಗೂ ಸಣ್ಣ ರೈತರ ಋಣಗಳನ್ನು ಸ್ವಲ್ಪಮಟ್ಟಿಗೆ ಪರಿಹಾರ ಮಾಡಿದಾಗ್ಯೂ ಇದಕ್ಕೆ ಈಗ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ಕೊಡುವಿರೆಂದು ನಾನು ನಂಬಿದ್ದೇನೆ.

ಜನ ಸಾಮಾನ್ಯರಿಗೆ ಅವಶ್ಯಕ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವಂತೆ ನೋಡಿಕೊಳ್ಳುವುದು ಇತ್ತೀಚಿನ ದಿನಗಳಲ್ಲಿ ನಿಮ್ಮ ವಿವಿಧ ಕಾರ್ಯಭಾರಗಳಲ್ಲಿ ಒಂದಾಗಿದೆ. ಈ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಕಾನೂನಿನ ಅವಶ್ಯಕತೆಯನ್ನು ನಾವು ಮನಗಂಡು ನಿಮಗೆ ವಿಶೇಷ ಅಧಿಕಾರಗಳನ್ನು ನೀಡಲಾಗಿದೆ. ನೀವು ಈ ಅಧಿಕಾರಗಳನ್ನು ಆರ್ಥಿಕ ಅಪರಾಧಿಗಳ ಮೇಲೆ ಚಲಾಯಿಸುವಾಗ ಯಾವ ರೀತಿಯಲ್ಲಿಯೂ ಹಿಂಜರಿಯಬಾರದು. ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಚಲಾಯಿಸುವಾಗ ಸರ್ಕಾರಕ್ಕೆ ಮುಚ್ಚುಮರೆಯಿಲ್ಲದೆ ತಮ್ಮ ಪ್ರಾಮಾಣಿಕ ಅಭಿಪ್ರಾಯವನ್ನು ಕೊಡಬೇಕು. ಸದರಿ ಅಭಿಪ್ರಾಯಗಳು ಸರಿ ಕಂಡರೆ ಸರ್ಕಾರ ಸಮ್ಮತಿಸಬಹುದು. ಇಲ್ಲವಾದರೆ ತಿರಸ್ಕರಿಸಬಹುದು. ನೀವುಗಳು ನಿಮ್ಮ ಗುರಿಯನ್ನು ಅರಿತುಕೊಂಡು

ಕಾರ್ಯಮಗ್ನರಾಗಬೇಕು. ಯಾವುದೇ ರೀತಿಯ ಅಕ್ರಮ ಒತ್ತಡಕ್ಕೆ ನೀವುಗಳು ಮಣಿಯಬಾರದು. ಸಾಮಾನ್ಯ ಪ್ರಜೆಯ ಹಿತರಕ್ಷಣೆಯೇ ನಿಮ್ಮ ಆದ್ಯ ಗುರಿಯಾಗಿರಬೇಕೆಂದು ನಾನು ಒತ್ತಿ ಹೇಳಬೇಕಾಗಿಲ್ಲ. ನಿಮಗೆ ವರಮಾನ ಬರುತ್ತಿರುವುದು ಈ ಪ್ರಜೆಗಳ ಹಿತರಕ್ಷಣೆ ಭಾಂದಿಂದ ಕೈಗೊಂಡಲ್ಲಿ ಯಾವ ಅನ್ಯಾಯಗಳು ನಡೆಯಲಿಕ್ಕೆ ಸಾಧ್ಯವಿಲ್ಲ. ಇಂತಹ ಕಾರ್ಯತತ್ಪರತೆಯನ್ನು ನೀವುಗಳು ಮೈಗೂಡಿಸಿಕೊಳ್ಳುವಿರೆಂದು ನನಗೆ ಭರವಸೆ ಇದೆ. ಈ ದೇಶದ ಜನತೆ ನಮ್ಮ ಮೇಲೆ ಹೆಚ್ಚಿನ ಹೊರೆಯನ್ನು ಹೊರಿಸಿದ್ದಾರೆ. ಅದನ್ನು ನಿರ್ವಹಿಸುವಾಗ ಇಂತಹ ನಿಷ್ಠೂರವಾದ ಮಾತುಗಳನ್ನು ನಾನು ನಿಮಗೆ ತಿಳಿಸಬೇಕಾಗಿದೆ. ಯಾರೂ ತಪ್ಪು ತಿಳಿಯಬಾರದು.

ಕೊನೆಯದಾಗಿ ನಿಮ್ಮ ಕಾರ್ಯಭಾರವು ಭರದಿಂದ ಸಾಗಿ ದೇಶದ ಪ್ರಜೆಗಳಿಗೆ ಸುಖವನ್ನೀಯಲೆಂದು ಹಾರೈಸಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.